ಇ. ಅನೇಕ ಉದ್ಯಮಿಗಳು ಭೂಮಿ ಹೊಂದುವ ಏಕೈಕ ಉದ್ದೇಶದಿಂದ ಕೈಗಾರಿಕೆಗಳನ್ನು ಪ್ರಾರಂಭಿಸಲು ಅನುಮತಿ ಕೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕೆಲವರು ತಮಗೆ ಮಂಜೂರಾಗಿದ್ದ ಭೂಮಿಯನ್ನು ಮಾಡಿಕೊಂಡು ದುರುಪಯೋಗಪಡಿಸಿಕೊಂಡಿರುವುದು ನಿಜವೇ;

ಈ. ಜಮೀನು ನೀಡುವಲ್ಲಿ ಪ್ರಭಾವಶಾಲಿ ಉದ್ಯಮಗಳಿಗೆ ಕಡಿಮೆ ಬೆಲೆಯಲ್ಲಿ ಜಮೀನು ನೀಡಿರುವುದು ನಿಜವೇ?

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ. ರಾಜ್ಯದಲ್ಲಿ ಕೈಗಾರಿಕಾ ಬಂಡವಾಳ ಹೂಡಿಕೆಯನ್ನು ಪ್ರೋತ್ಸಾಹಿಸಲು ಜಾಗತಿಕ ಹೂಡಿಕೆದಾರರ ಸಮಾವೇಶವನ್ನು ಜೂನ್ 2000 ಮಾಹೆಯಲ್ಲಿ ಆಯೋಜಿಸಲಾಯಿತು.

ಆ. ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ಜೂನ್ 2000ರಲ್ಲಿ ರಾಜ್ಯಮಟ್ಟದ ಏಕಗವಾಕ್ಷಿ ಸಮಿತಿಯಿಂದ 178 ಕೈಗಾರಿಕಾ ಯೋಜನೆಗಳನ್ನು (ಪ್ರತಿಯೊಂದು ಘಟಕದಲ್ಲೂ ರೂ. 50.00 ಕೋಟಿ ಅಥವ ಕಡಿಮೆ ಬಂಡವಾಳದ ಯೋಜನೆಗಳು) ಅನುಮೋದಿಸಲಾಗಿರುವುದು. ಈ 178 ಯೋಜನೆಗಳಲ್ಲಿ ಒಟ್ಟು ಬಂಡವಾಳ ಹೂಡಿಕೆ ರೂ. 2243.52 ಕೋಟಿಯಾಗಿರುತ್ತದೆ. ಇದುವರೆವಿಗೂ ಈ ಯೋಜನೆಗಳಲ್ಲಿ 45 ಕೈಗಾರಿಕಾ ಯೋಜನೆಗಳು ಕಾರ್ಯಾರಂಗೊಂಡಿದ್ದು ರೂ. 443.63 ಕೋಟಿಗಳ ಬಂಡವಾಳ ಹೂಡಿಕೆಯಾಗಿದ್ದು ಉನ್ನತ ಮಟ್ಟದ ಸಮಿತಿಯಿಂದ 47 ಕೈಗಾರಿಕಾ ಯೋಜನೆಗಳನ್ನು (ರೂ. 50.00 ಕೋಟಿಗಳಿಗಿಂತ ಹೆಚ್ಚು ಬಂಡವಾಳ) ರೂ. 23082. 72 ಕೋಟಿಗಳಿಗೆ ಅನುಮೋದಿಸಲಾಗಿರುವುದು. ಇದುವರೆವಿಗೂ ಈ ಯೋಜನೆಗಳಲ್ಲಿ 3 ಕೈಗಾರಿಕಾ ಯೋಜನೆಗಳು ಕಾರ್ಯಾರಂಭಗೊಂಡಿದ್ದು, ರೂ. 411.10 ಕೋಟಿಗಳ ಬಂಡವಾಳ ಹೂಡಿಕೆಯಾಗಿದೆ.

ಇ. ಇಂತಹ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ. ಒಂದೇ ಘಟಕ ಸಂಕೀರ್ಣಕ್ಕೆ ಹಂಚಿಕೆ ಬೆಲೆಯನ್ನು ಭೂ ಸ್ವಾಧೀನ ವೆಚ್ಚದ ಜೊತೆಗೆ ಕೆಐಎಡಿಬಿ ಸೇವಾ ಶುಲ್ಕವನ್ನು ಸೇರಿಸಿ ನಿಗಧಿಪಡಿಸಲಾಗುವುದು. ಜಮೀನು ಅಭಿವೃದ್ಧಿ ಇದ್ದ ಪಕ್ಷದಲ್ಲಿ ಹಂಚಿಕೆ ಬೆಲೆಯನ್ನು ಭೂಸ್ವಾಧೀನ ವೆಚ್ಚದ ಜೊತೆಗೆ ಅಭಿವೃದ್ಧಿ ವೆಚ್ಚ-ಸೇವಾ ಶುಲ್ಕ ಸೇರಿಸಿ ನಿಗಧಿಪಡಿಸಲಾಗುವುದು.

ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳು ಮುಚ್ಚುತ್ತಿರುವುದರಿಂದ ಉಂಟಾಗಿರುವ ಪರಿಸ್ಥಿತಿ

1804(2126): ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿರುವ ಒಟ್ಟು ಸಣ್ಣ ಕೈಗಾರಿಕೆಗಳೆಷ್ಟು;

ಆ. ಇವುಗಳ ಪೈಕಿ ಎಷ್ಟು ಸಣ್ಣ ಕೈಗಾರಿಕೆಗಳು ಮುಚ್ಚಿವೆ ಹಾಗೂ ಎಷ್ಟು ನಷ್ಟದಲ್ಲಿ ಕೆಲಸ ನಿರ್ವಹಿಸುತ್ತಿವೆ;

ಇ. ಸಣ್ಣ ಕೈಗಾರಿಕೆಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಈ. ಸಣ್ಣ ಕೈಗಾರಿಕೆಗಳಿಗೆ ಕೆಲವು ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಉ. ಸಣ್ಣ ಕೈಗಾರಿಕೆಗಳಿಗೆ ಹಣಕಾಸಿನ ನೆರವು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಊ. ಈ ಸಣ್ಣ ಕೈಗಾರಿಕೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು?

ಋ. ಸಣ್ಣ ಕೈಗಾರಿಕೆಗಳು ತಯಾರಿಸುವ ವಸ್ತುಗಳನ್ನು ಸರ್ಕಾರಿ ಇಲಾಖೆಗಳು, ನಿಗಮ:ಮಂಡಳಿ ಇತ್ಯಾದಿಗಳು ಖರೀದಿಸಲು ಸರ್ಕಾರ ಆದೇಶಿಸುತ್ತದೆಯೇ?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು)

ಅ. ದಿನಾಂಕ 30.11.2002ರಲ್ಲಿದ್ದಂತೆ 292845

ಆ. ಏಪ್ರಿಲ್ 2001ರಂದು ಭಾರತ ಸರ್ಕಾರದವರು ನಡೆಸಿದ ಸಣ್ಣ ಕೈಗಾರಿಕೆಗಳ ಸಮೀಕ್ಷಾವರದಿ ಪ್ರಕಾರ ಸಮೀಕ್ಷೆ ನಡೆಸಿದ ಘಟಕಗಳ ಪೈಕಿ ಶೇ.50 ರಷ್ಟು ಮಾತ್ರ ಕಾರ್ಯನಿರ್ವಹಿಸುತ್ತಿರುವುದಾಗಿ ವರದಿಯಾಗಿದೆ. ಉಳಿದ ಶೇ. 50 ರಷ್ಟು ಘಟಕಗಳು ರೋಗಗ್ರಸ್ಥವಾಗಿರುವುದಾಗಿಯೂ, ರೋಗಗ್ರಸ್ತಹಾಗಿಯಲ್ಲಿರುವುದಾಗಿಯೂ ಅಥವಾ ಮುಚ್ಚಿರುವುದಾಗಿಯೂ ವರದಿಯಾಗಿದೆ. ಸಣ್ಣ ಕೈಗಾರಿಕೆಗಳ ಪೂರ್ಣ ಸ್ಥಿತಿ ಗತಿಗಳನ್ನು ತಿಳಿಯಲು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಸಣ್ಣ ಪ್ರಮಾಣದ ಕೈಗಾರಿಕೆಗಳ ಗಣತಿ ಕಾರ್ಯ ಪ್ರಾರಂಭಿಸಿದ್ದು ಪ್ರಗತಿಯಲ್ಲಿದೆ. ಇದು ಪೂರ್ಣಗೊಂಡ ನಂತರ ಈ ಬಗ್ಗೆ ನಿಖರವಾದ ಅಂಕಿಂಶಗಳು ಲಭ್ಯವಾಗುತ್ತದೆ.

ಇ. ರಾಜ್ಯದ ಕೈಗಾರಿಕಾ ನೀತಿ 2001-06ರಲ್ಲಿ ರಾಜ್ಯದ ಕೈಗಾರಿಕೆಗಳ ಸರ್ವತೋಮುಖ ಬೆಳವಣಿಗಾಗಿ ಅನೇಕ ಯೋಜನೆಗಳನ್ನು ರೂಪಿಸಲಾಗಿದೆ.

ವಿವರ ಈ ಕೆಳಕಂಡಂತಿವೆ.

1. ತಂತ್ರಜ್ಞಾನ ಉನ್ನತೀಕರಣ
2. ಗುಣಮಟ್ಟ ಉನ್ನತೀಕರಣ
3. ಮೂಲಭೂತ ಸೌಕರ್ಯ ನಿಧಿ
4. ವ್ಯವಹಾರ ಪರಸರದ ಅನಿಯಂತ್ರಣ
5. ಸಣ್ಣ ಕೈಗಾರಿಕಾ ಕ್ಷೇತ್ರಕ್ಕೆ ಮಾರಾಟ ಸಹಾಯ
6. ಐಎಸ್‌ಒ - 9000, ಐಎಸ್‌ಒ - 14000 ಪ್ರಮಾಣ ಪತ್ರ ಪಡೆದ ಘಟಕಗಳಿಗೆ ಉತ್ತೇಜನ ನೀಡುವುದು
7. ಡಬ್ಲ್ಯೂಟಿಒ ರಿಲೇ ಕೇಂದ್ರ - ಇದರಲ್ಲಿ ಕೈಗಾರಿಕಾ ಉದ್ಯಮಿಗಳಿಗೆ ಈ ಒಪ್ಪಂದದಿಂದ ಆಗಿರುವ ತೊಂದರೆಗಳ ಬಗ್ಗೆ ಹಾಗೂ ಇತರೆ ವಿಷಯಗಳ ಬಗ್ಗೆ ಮಾಹಿತಿಗಳನ್ನು ನೀಡುವುದು.

ಈ. ಸಣ್ಣ ಕೈಗಾರಿಕೆಗಳಿಗೆ ಮೂಲಭೂತ ಸೌಕರ್ಯಗಳನ್ನು ಕೆಎಸ್ ಎಸ್‌ಐಡಿಸಿ, ಕೆಐಎಡಿಬಿ ಸಂಸ್ಥೆಗಳ ಮೂಲಕ ಒದಗಿಸಲಾಗುತ್ತಿದೆ. ಈ ಬಗ್ಗೆ ರಾಜ್ಯದ ಕೈಗಾರಿಕಾ ನೀತಿ 2001-06ರಲ್ಲೂ ಸಹ ಒತ್ತು ನೀಡಲಾಗಿದೆ.

ಉ. ಸಣ್ಣ ಕೈಗಾರಿಕೆಗಳಿಗೆ ಸರ್ಕಾರದಿಂದ ನೇರವಾಗಿ ಹಣಕಾಸಿನ ನೆರವು ಒದಗಿಸುವ ಯಾವುದೇ ಕಾರ್ಯಕ್ರಮಗಳು ಇರುವುದಿಲ್ಲ. ಆದಾಗ್ಯೂ ಹೊಸ ಕೈಗಾರಿಕಾ ನೀತಿಯನ್ವಯ ಮೇಲೆ ತೋರಿಸಿರುವ ಸೌಲಭ್ಯವನ್ನು ನೀಡಲಾಗುತ್ತಿದೆ.

ಊ. 1697421

ಖು. ರಾಜ್ಯದ ಕೈಗಾರಿಕಾ ನೀತಿ 2001-06ರಂತೆ ರಾಜ್ಯದ ಸಣ್ಣ ಕೈಗಾರಿಕೆಗಳು ಉತ್ಪಾದಿಸುವ ವಸ್ತುಗಳಿಗೆ ಬೆಲೆಯಲ್ಲಿ ಶೇ. 15 ರಷ್ಟು ಆದ್ಯತೆ ಹಾಗೂ ಖರೀದಿಯಲ್ಲಿ ಶೇ. 75ರಷ್ಟು ಮೀಸಲಾತಿ ಸೌಲಭ್ಯಗಳನ್ನು ನೀಡಲಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿ ಮೀನುಗಾರರಿಗೆ ಮನೆಗಳು

1805(2298): ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಹಿಟ್ಟಣಗಿ ಹಾಗೂ ಮಾಟೊಳ್ಳಿ ಗ್ರಾಮಗಳಲ್ಲಿ ಹಾಗೂ ಬೈಲಹೊಂಗಲ ತಾಲ್ಲೂಕಿನ ಕೆಂಗನೂರು ಗ್ರಾಮಗಳಲ್ಲಿ ಮೀನುಗಾರರಿಗೆ ಮನೆ ಕಟ್ಟಿಕೊಡಲು ಯಾವ ಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ;

ಆ. ಅದು ಈಗ ಯಾವ ಹಂತದಲ್ಲಿದೆ?

ಶ್ರೀ ವಿ. ವಸಂತ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು)

ಅ. ಬೆಳಗಾವಿ ಜಿಲ್ಲೆ, ಸವದತ್ತಿ ತಾಲ್ಲೂಕು ಹಿಟ್ಟಣಗಿ ಗ್ರಾಮದ ಮೀನುಗಾರರಿಂದ ಮನೆ ಬೇಡಿಕೆ ಅರ್ಜಿಗಳು ಬಂದಿರುವುದಿಲ್ಲ. ಮಾಟೊಳ್ಳಿ ಗ್ರಾಮದಲ್ಲಿ 1995-96ನೇ ಸಾಲಿನಲ್ಲಿ 37 ಮನೆಗಳನ್ನು ನಿರ್ಮಾಣ ಮಾಡಿ ಫಲಾನುಭವಿಗಳಿಗೆ ವಿತರಿಸಲಾಗಿದೆ. ಬೈಲಹೊಂಗಲ ತಾಲ್ಲೂಕಿನ ಕೆಂಗಾನೂರು ಗ್ರಾಮದಲ್ಲಿ 1995-96ನೇ ಸಾಲಿನಲ್ಲಿ 64 ಮನೆಗಳನ್ನು ನಿರ್ಮಾಣ ಮಾಡಿ ಮೀನುಗಾರರಿಗೆ ಹಂಚಿಲಾಗಿದೆ.

ಆ. ಸವದತ್ತಿ ತಾಲ್ಲೂಕಿನ ಮಾಟೊಳ್ಳಿ ಗ್ರಾಮದ 37 ಮನೆಗಳಲ್ಲಿ ಮತ್ತು ಬೈಲಹೊಂಗಲ ತಾಲ್ಲೂಕಿನ ಕೆಂಗಾನೂರು ಗ್ರಾಮದಲ್ಲಿ 64 ಮನೆಗಳಲ್ಲಿ ಮೀನುಗಾರರು ಈಗಾಗಲೇ ವಾಸಿಸುತ್ತಿದ್ದಾರೆ.

ಬೆಳಗಾವಿ ಜಿಲ್ಲೆಯಲ್ಲಿ ಹೊಸ ಪಶು ಚಿಕಿತ್ಸಾಲಯಗಳನ್ನು ಪ್ರಾರಂಭಿಸುವುದು

1806(2299): ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ವಣ್ಣೂರ ಹಾಗೂ ಕೆಂಗಾನೂರು ಗ್ರಾಮಗಳಲ್ಲಿ ಹಾಗೂ ಸವದತ್ತಿ ತಾಲ್ಲೂಕಿನ ಮಾಟೊಳ್ಳಿ ಗ್ರಾಮಗಳಲ್ಲಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಆ. ಸವದತ್ತಿ ತಾಲ್ಲೂಕಿನ ಮರಕುಂಚಿ ಗ್ರಾಮಗಳಲ್ಲಿರುವ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೆರಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಂ. ಮಹದೇವ್ (ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು)

ಅ. ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪ್ರಾರಂಭಿಸುವ ಕಾರ್ಯಕ್ರಮ ಸರಕಾರದ ಮುಂದೆ ಇಲ್ಲ.

ಇ. ಹೌದು